# ಮಾನವ ಜನ್ಮದ ಹಿರಿಮೆ

◆ ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು



[ಶೃಂಗೇರಿ ಶಾರದಾ ಪೀಠದ ೩೪ನೇ ಅಧಿಪತಿಗಳಾಗಿದ್ದ ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು (೧೮೯೨-೧೯೫೪) ಜೀವನ್ಮುಕ್ತರೆಂದು, ಸಂತರೆಂದು ಪ್ರಸಿದ್ಧರಾಗಿದ್ದರು. ಅವರ ಅಲೌಕಿಕ ಸಾಮರ್ಥ್ಯ, ಸಿದ್ಧಿಗಳನ್ನು ಸೂಚಿಸುವ ನೂರಾರು ಪ್ರಸಂಗಗಳು ಜನರ ನೆನಪಿನಲ್ಲಿ ಇಂದಿಗೂ ಉಳಿದುಕೊಂಡಿವೆ. ಹಿಂದಿನ ವಾಮದೇವ ಋಷಿಯಂತೆ, ಶುಕ ಮುನಿಯಂತೆ, ಜಡಭರತ ರಾಜನಂತೆ ಈಚಿನ ಸದಾಶಿವ ಬ್ರಹ್ಮೇಂದ್ರರಂತೆ ಬಾಳಿ ಮರೆಯಾದ ಈ ಮಹನೀಯರು ಶಾಸ್ತ್ರಗಳಲ್ಲಿ ಹೇಳಿರುವ ಜೀವನ್ಮುಕ್ತರ ಲಕ್ಷಣದಂತೆ 'ಬಾಲೋನ್ಮತ್ತ ಪಿಶಾಚವತ್' (ಬಾಲಕನಂತೆ, ಪಿಶಾಚಿಯಂತೆ ಉನ್ಮತ್ತನಂತೆ) ಇದ್ದವರು. 'ಶರಣರ ಹಿರಿಮೆಯನ್ನು ಮರಣದಲ್ಲಿ ನೋಡು' ಎಂಬ ಗಾದೆಯಂತೆ ೧೯೫೪ನೇ ಇಸವಿಯ ಮಹಾಲಯ ಅಮಾವಾಸ್ಯೆಯಂದು (ಸೆಪ್ಟೆಂಬರ್ ೨೬, ಭಾನುವಾರ) ಸೂರ್ಯೋದಯಕ್ಕೆ ಬಹು ಮುಂಚೆಯೇ ತುಂಗಾನದಿಯಲ್ಲಿ ಸ್ವ-ಇಚ್ಛೆಯಿಂದ ಹಾಗೂ ಯೋಗಮಾರ್ಗದಿಂದ, ದೇಹತ್ಯಾಗ ಮಾಡಿದರು.

ಪೂಜ್ಯರು ೧೯೨೪ರಿಂದ ೧೯೨೮ರ ಅವಧಿಯಲ್ಲಿ ನಡೆಸಿದ ಪ್ರಥಮ ದಿಗ್ವಿಜಯ ಯಾತ್ರೆಯ ಸಮಯದಲ್ಲಿ ತಮಿಳುನಾಡಿನಲ್ಲಿ ಮಾಡಿದ ಒಂದು ಪ್ರವಚನ ಇದು.]

ಸೃಷ್ಟಿಯಲ್ಲಿ ಪ್ರಾಣಿಗಳೇ ಹೆಚ್ಚಾಗಿ ಕಷ್ಟ ಪಡುತ್ತವೆ. ದೇವತೆಗಳು ಅಥವಾ ದೇವಲೋಕದವರು ಅಂದರೆ ಬರೀ ಸುಖ ಪಡುವವರು. ಮಾನವರು ಕಷ್ಟ ಮತ್ತು ಸುಖ ಎರಡನ್ನೂ ಅನುಭವಿಸುತ್ತಾರೆ. ಕಾರಣವಿಲ್ಲದೆ ಕಾರ್ಯವಿಲ್ಲ. ತರ್ಕಬದ್ಧವಾಗಿ ಹೇಳಬೇಕೆಂದರೆ, ಕಾರಣದಲ್ಲಿಯೂ ಮೇಲೆ ಹೇಳಿದ ವ್ಯತ್ಯಾಸಗಳಿಗೆ ಕಾರಣವಾಗುವಂತಹ ವ್ಯತ್ಯಾಸಗಳಿರಲೇಬೇಕು. ಸರ್ವಜ್ಞನಾದ ಈಶ್ವರನನ್ನು ಪಕ್ಷಪಾತಿ ಎಂದೂ, ಮತ್ತು ತನಗಿಷ್ಟವಾದಂತೆ ಕೆಲವರನ್ನು ಸಂತೋಷಿಗಳನ್ನಾಗಿಯೂ, ಕೆಲವರನ್ನು ದುಃಖಿಗಳನ್ನಾಗಿಯೂ, ಮತ್ತೆ ಕೆಲವರನ್ನು ಮರಗಳನ್ನಾಗಿಯೂ ಅಥವಾ ಇನ್ನು ಕೆಲವರನ್ನು ಪ್ರಾಣಿಗಳನ್ನಾಗಿಯೂ ಮಾಡುತ್ತಾನೆಂದು ದೂಷಿಸಲಾಗದು. ಅದು ಹಾಗಿದ್ದಿದ್ದರೆ, ಭಾವೋದ್ರೇಕದಿಂದ ಹಾಗೂ ಮೋಹದಿಂದ ತಪ್ಪು ನಿರ್ಧಾರಗಳನ್ನು ತೆಗೆದುಕೊಳ್ಳುವ ಮಾನವನಿಗೂ, ಈಶ್ವರನಿಗೂ ಏನೂ ವ್ಯತ್ಯಾಸವಿರದು. "ನನಗೆ ಎಲ್ಲ ಜೀವಿಗಳೂ ಸಮಾನರು; ಮತ್ತು ಯಾರಲ್ಲಿಯೂ ನನಗೆ ವಿಶೇಷವಾದ ಅಭಿಮಾನವಿಲ್ಲ" ಎಂಬ ಈಶ್ವರನ ಹೇಳಿಕೆಯೇ ಸುಳ್ಳಾದೀತು.

ಈಗ ಏನಾಗುತ್ತಿದೆ ಎಂದು ನೋಡೋಣ. ಈ ವ್ಯತ್ಯಾಸಗಳನ್ನು ಬುದ್ಧಿಯಿಂದ ವಿವರಿಸಬಹುದೇ? ಒಂದೇ ತಂದೆ, ತಾಯಿಯ ಮಕ್ಕಳು ವಿವಿಧ ಸ್ವಭಾವಗಳನ್ನು ಹೊಂದಿರುವುದನ್ನು ಕಾಣಬಹುದು. ಪುರಾಣದ ಕಥೆಗಳಲ್ಲಿ ಬರುವ ಹಿರಣ್ಯಕಶಿಪುವಿನ ಇಬ್ಬರು ಮಕ್ಕಳಾದ ಅನುಹ್ಲದ ಮತ್ತು ಪ್ರಹ್ಲಾದರು ಒಂದೇ ಸ್ವಭಾವದವರಾಗಿರಲಿಲ್ಲ. ತಂದೆಯಾದ ಹಿರಣ್ಯಕಶಿಪು ವಿಷ್ಣುವಿನ ಬದ್ಧದ್ವೇಷಿಯಾಗಿದ್ದರೂ ಪ್ರಹ್ಲಾದ ವಿಷ್ಣುವಿನ ಭಕ್ತರಲ್ಲಿ ಅಗ್ರಗಣ್ಯನಾಗಿದ್ದ. ಆದ್ದರಿಂದ, ವಂಶಪಾರಂಪರ್ಯ ಅಥವಾ ರಕ್ತಸಂಬಂಧದ ಮೂಲಕ ಸ್ವಭಾವವನ್ನು ನಿರ್ಧರಿಸಲು ನಮಗೆ ಸಾಧ್ಯವಿಲ್ಲ. ಹೋಗಲಿ, ಹುಟ್ಟಿದ ಕ್ಷಣವನ್ನು ಗಣನೆಗೆ ತೆಗೆದುಕೊಂಡರೂ, ಅಲ್ಲಿಯೂ ಒಂದೇ ಸಮಯದಲ್ಲಿ ಜನಿಸಿದ ಅವಳಿ ಮಕ್ಕಳಲ್ಲಿ ಅಜಗಜಾಂತರ ವ್ಯತ್ಯಾಸವಿರುವುದನ್ನು ಕಾಣುತ್ತೇವೆ. ಆದ್ದರಿಂದ ಯಾವುದನ್ನು ತರ್ಕಯುತವಾಗಿ ಅಥವಾ ವಿವೇಚನಾ ಶಕ್ತಿಯಿಂದ ವಿವರಿಸಲಾಗದೋ, ಅದರ ಹಿಂದೆ ಅಗೋಚರವಾದ ಒಂದು ಕಾರಣವಿರಬೇಕು.

ಕರ್ಮಗಳ ಫಲದಿಂದಾಗಿ ಸುಖ ಮತ್ತು ದುಃಖಗಳು ಉಂಟಾಗುವುವು ಎಂಬುದನ್ನು ನಿರ್ದಿಷ್ಟವಾಗಿ ಹೇಳುವ ಅಧಿಕಾರಯುತ ಮೂಲಗಳಾದ ಶಾಸ್ತ್ರಗಳತ್ತ—ಮೇಲೆ ಹೇಳಿದ ಕಾರಣಗಳಿಂದ ನಾವು ಹಿಂದಿರುಗಬೇಕಾಗಿದೆ. ಕಷ್ಟ ಅಥವಾ ಸುಖಗಳ ಕರ್ಮಫಲವನ್ನು ಅನುಭವಿಸಲು ಕೆಲವರು ಮಾನವಗರ್ಭವನ್ನು, ಕೆಲವರು ಪ್ರಾಣಿಗರ್ಭವನ್ನು ಹೊಂದುತ್ತಾರೆ; ಅಥವಾ ಮರ, ಗಿಡಗಳಾಗಿ ಹುಟ್ಟುತ್ತಾರೆ. ಓರ್ವ ವ್ಯಕ್ತಿಯ ಪ್ರವೃತ್ತಿಗಳು, ಅವನ ಹಿಂದಿನ ಜನ್ಮದ ಸಂಸ್ಕಾರಗಳ ಮುಂದುವರಿಕೆಯಂತೆಯೇ ಆಗಿರುತ್ತವೆ. ಅದು ಚಂಚಲ ಚಿತ್ತ ಮನಸ್ಸಿನ, ಅತಿ ಮೋಹದ ಕಾರಣವಾಗಿರುತ್ತದೆ. ಸುರೇಶ್ವರಾಚಾರ್ಯರು (ಶ್ರೀಶಂಕರಾಚಾರ್ಯರ ನೇರ ಶಿಷ್ಯರು ಹಾಗೂ ಶಾರದಾ ಪೀಠದ ಪ್ರಥಮ ಪೀಠಾಧಿಪತಿಗಳು) ಹೇಳುವಂತೆ, ಒಬ್ಬಾತ ತನ್ನ ಮುಂದಿನ ಜನ್ಮವನ್ನು ತಾನೇ ಸೃಷ್ಟಿಸಿಕೊಳ್ಳುತ್ತಾನೆ. ವಿವರವಾಗಿ ಹೇಳಬೇಕೆಂದರೆ, ಪುಣ್ಯಗಳು ಜಾಸ್ತಿ ಇದ್ದರೆ ಅವನು

ದೇವಶರೀರವನ್ನು ಹೊಂದುತ್ತಾನೆ. ಅತಿಯಾದ ಪಾಪಗಳನ್ನು ಮಾಡಿದ್ದರೆ ಪ್ರಾಣಿಜನ್ಮ ಬರುತ್ತದೆ. ಪುಣ್ಯಪಾಪ ಕಾರ್ಯಗಳಲ್ಲಿ ಎರಡರಲ್ಲಿಯೂ ನಿರತನಾಗಿದ್ದರೆ ಮಾನವ ಜನ್ಮ ಹೊಂದುತ್ತಾನೆ.

ಮಾನವ ಜನ್ಮ ತಳೆದು ನಾವೇನು ಸಾಧಿಸಿದ್ದೇವೆ? ಎಲ್ಲ ಕಾಲ ದಲ್ಲಿಯೂ ಸುಖವನ್ನು ಅನುಭವಿಸಲು ಸಾಧ್ಯವಾಗಿದೆಯೇ? ದುಃಖವನ್ನು ಮೂಲೋತ್ಪಾಟನೆ ಮಾಡಿದ್ದೇವೆಯೇ? ಇದು ಕಲಿಯುಗ ವೆಂದು ನಾವು ದೂಷಿಸಲಾರೆವು—ಏಕೆಂದರೆ ಈ ಹಿಂದೆಯೂ ಮಾನವ ಜೀವಿಗಳು ಈ ಭೂಮಿಯ ಮೇಲೆ ಕಷ್ಟ ಸುಖಗಳಿಂದ ವಾಸಿಸುತ್ತಿದ್ದುದನ್ನು ನೋಡಿದ್ದೇವೆ. ತಮ್ಮ ಆದರ್ಶಪ್ರಾಯವಾದ ಜೀವನದಿಂದ ನಡೆದಾಡುವ ದೇವರೆಂದು ಕರೆಯಿಸಿಕೊಳ್ಳುತ್ತಿರುವ ಸಾಧು, ಸಂತರನ್ನು ಈ ಕಾಲದಲ್ಲಿಯೂ ನಾವು ನೋಡುತ್ತಿಲ್ಲವೇ? ತಮ್ಮ ಬಾಯಿಂದ ವಿವೇಕಯುಕ್ತ ಮಾತುಗಳೆಂಬ ಮಾಣಿಕ್ಯಗಳನ್ನು ಉದುರಿಸುತ್ತಿರುವ ತೇಜೋದೀಪ್ತವದನರಾದ ಸಿದ್ಧಪುರುಷರ, ಜ್ಞಾನಿಗಳ ನುಡಿಗಳನ್ನು ನಾವು ಕೇಳಿಲ್ಲವೇ?

ಇಷ್ಟಾಗಿಯೂ ನಾವು ನಮ್ಮ ಜೀವನದಲ್ಲಿ ಏಕೆ ಯಾವ ಮಾರ್ಗವನ್ನೂ ಕಂಡಿಲ್ಲ? ಸದಾ ಅತ್ತಿಂದಿತ್ತ ಓಡುವ ಚಂಚಲ ಮನಸ್ಸನ್ನು ನಿಗ್ರಹಿಸಲು ಸಮರ್ಥರಾಗಿದ್ದೇವೆಯೇ? ಜ್ಞಾನಿಗಳು ಬೋಧಿಸಿದ ಮೌಲ್ಯಗಳಲ್ಲಿ ಒಂದನ್ನಾದರೂ ನಮ್ಮ ಜೀವನದಲ್ಲಿ ಅಳವಡಿಸಿಕೊಂಡಿರುವೆವೆ? ಬದಲಾಗಿ, ಲೌಕಿಕ ಆಕರ್ಷಣೆಗಳಿಂದ ಎತ್ತೆಂದರತ್ತ ದಿಕ್ಕೆಟ್ಟು ಅಲೆದಾಡುತ್ತಿದ್ದೇವೆ. ನಾಗರಹಾವಿನ ನಾಲಿಗೆಯಷ್ಟು ವಿಷಯುಕ್ತವಾದ ವಸ್ತುಗಳನ್ನು ಹೊರನೋಟದಿಂದ ತಪ್ಪಾಗಿ ಗ್ರಹಿಸಿ, ಅದೇ ನಮ್ಮ ಪರಮ ಸುಖದ ಸಾಧನೆಯೆಂದು ಭಾವಿಸುತ್ತೇವೆ. ಭಗವಂತನ ವಾಣಿಯನ್ನು ಕೇಳಿದ ಮೇಲೂ ಪರಿವರ್ತನೆಗೊಳ್ಳದ ಮಹಾಭಾರತದ ದುರ್ಯೋಧನನಂತೆ ನಾವಿರುತ್ತೇವೆ.

ಸಂಸ್ಕಾರಗಳ ಸೆಳೆತದಿಂದ ಮನಸ್ಸಿಗೆ ಬಂದಂತೆ ನಾವು ಜೀವನ ಕಳೆಯುವುದಾದರೆ, ಅಂತ್ಯವಿಲ್ಲದ ಈ ಜನನ-ಮರಣ ಚಕ್ರ ದಿಂದ ಪಾರಾಗುವುವೆಂದು ಹೇಗೆ ನಿರೀಕ್ಷಿಸಬಲ್ಲೆವು? ಶಾಶ್ವತವಾದ ಸುಖವನ್ನು ಹೇಗೆ ಅನುಭವಿಸಬಲ್ಲೆವು? ಪರಮಾರ್ಥ ಪ್ರಾಪ್ತಿಗೆಂದು ಜನ್ಮತಾಳಿದ ನಾವು ಮೂಲ ಉದ್ದೇಶವನ್ನೇ ಮರೆಯುವುದೆ? ನರಜನ್ಮ ತಾಳಿಯೂ ಆತ್ಮಜ್ಞಾನ ಪಡೆಯುವಲ್ಲಿ ವಿಫಲರಾದರೆ, ಪ್ರಾಣಿಗಳ ಜನ್ಮದಂತೆಯೇ ನಮ್ಮ ಜನ್ಮವೂ ಕೂಡ ವ್ಯರ್ಥ ವಾಗುವುದು. ಶರೀರವೆಂಬ ಈ ದೋಣಿಯು ದೊರೆತಿರುವುದು ನಮ್ಮ ಅನೇಕ ಪುಣ್ಯಕಾರ್ಯಗಳ ಫಲದಿಂದ. ಅದು ನಾಶವಾಗುವ ಮುಂಚೆ, ದುಃಖಮಯವಾದ ಈ ಸಂಸಾರವನ್ನು ದಾಟಿ ಆಚೆಯ ದಡವನ್ನು ಸೇರಬೇಕು. ಮಾನವ ಜನ್ಮದ ಉಪಯುಕ್ತತೆಯನ್ನೇ ದುರ್ವ್ಯಯ ಮಾಡಿದವನಿಗಿಂತ, ಇನ್ನೂ ದೊಡ್ಡ ಮೂರ್ಖರಾರಿರ ಬಹುದು?

ಶಂಕರ ಭಗವತ್ಪಾದರು ಹೇಳಿದಂತೆ, ಗೋವು ಮತ್ತು ಇತರ ಪ್ರಾಣಿಗಳೂ ಕೂಡ, ಅಪಾಯಕಾರಿ ಧ್ವನಿಗಳಿಂದ ದೂರ ಸರಿದು, ಹಿತವಾದ ಧ್ವನಿಗಳತ್ತ ತಾವಾಗಿಯೇ ಹೇಗೆ ಹೋಗುತ್ತವೆಯೋ, ಮಾನವರೂ ಕೂಡ ದುರ್ಮಾರ್ಗಕ್ಕೆ ಎಳೆಯುವವರ ಸಂಗದಿಂದ ದೂರವಿದ್ದು, ಸಾತ್ವಿಕರು ಮತ್ತು ಸಿದ್ಧಪುರುಷರ ಸಂಗವನ್ನು ಮಾಡಬೇಕು.

ಆದ್ದರಿಂದ ಒಬ್ಬಾತ ಬುದ್ಧಿಶಕ್ತಿಯನ್ನು ಮತ್ತು ವಿವೇಕವನ್ನು ಉಪಯೋಗಿಸಿ ಇಂದ್ರಿಯಭೋಗಪ್ರಧಾನವಾದ ಈ ಜೀವನಕ್ಕೆ ಮತ್ತೆ ಮತ್ತೆ ಬಾರದಂತೆ ನೋಡಿಕೊಳ್ಳಬೇಕು, ಪ್ರಯತ್ನಿಸಬೇಕು. ಸಾರ್ಥಕ ಜೀವನಕ್ಕೆ ಶಾಸ್ತ್ರಗಳು ವಿಧಿಸಿರುವ ನಿಯಮಗಳನ್ನು ಅನುಸರಿಸಿದಾಗ ಮಾತ್ರ ಶಾಶ್ವತ ಸುಖ ಸಾಧ್ಯವಾಗುತ್ತದೆ.

**[ಆಧಾರ : ಆಂಗ್ಲ ಮಾಸಿಕ ತತ್ತ್ವಾಲೋಕ ಮೇ, ೨೦೦೨, ಚೆನ್ನೈ. ಭಾವಾನುವಾದ : ಎನ್. ಗೋಪಿನಾಥ, ಶಿವಮೊಗ್ಗ.]** ✡

## ಪರಮತ ಖಂಡನೆ, ಕಾಲವ್ಯರ್ಥ

ಶ್ರೀ ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳು ಉದಾರ ಚರಿತರು; ಸ್ವಮತ ಪ್ರತಿಪಾದನೆಗೆ ಪರಮತ ಖಂಡನೆ ಅವಶ್ಯ ಎಂಬುದನ್ನು ಅವರು ಒಪ್ಪುತ್ತಿರಲಿಲ್ಲ. ಇತರೆ ಪಂಥ ಹಾಗೂ ಮತಗಳ ಆಚಾರ್ಯರು, ಗುರುಗಳು ಹಾಗೂ ಪಂಡಿತರು ಮುಂತಾದವರ ಬಗ್ಗೆ ತುಂಬು ಗೌರವದಿಂದ ನಡೆದುಕೊಳ್ಳುತ್ತಿದ್ದರು.

ಒಮ್ಮೆ ಪಂಡಿತರೊಬ್ಬರು ತಾವು ದ್ವೈತ ಮತವನ್ನು ಖಂಡಿಸಿ ಬರೆದ ಗ್ರಂಥವನ್ನು ತಂದು ಸ್ವಾಮಿಗಳ ಮುಂದೆ ಇಟ್ಟು ನಮಸ್ಕರಿಸಿದರು. ತಮ್ಮ ಈ ಪ್ರಯತ್ನವನ್ನು ಸ್ವಾಮಿಗಳು ಪ್ರಶಂಸಿಸಿ, ಪುರಸ್ಕರಿಸುವರೆಂದು ಅವರ ಆಸೆ. ಗ್ರಂಥದ ವಿಷಯವನ್ನು ಪಂಡಿತರಿಂದ ತಿಳಿದ ಸ್ವಾಮಿಗಳು ಗಂಭೀರವಾಗಿ ಹೇಳಿದರು: "ಪುಣ್ಯ ಪುರುಷಾರ್ಥಗಳಿಲ್ಲದ ಈ ಹೊರೆಯನ್ನು ನಮ್ಮ ಬಳಿಗೇಕೆ ತಂದಿರಿ? ಗ್ರಂಥರಚನೆಯ ಸಾಮರ್ಥ್ಯವನ್ನು ಭಗವಂತ ನಿಮಗೆ ಅನುಗ್ರಹಿಸಿದ್ದಾನೆ. ಅದನ್ನು ಸರಿಯಾಗಿ ಉಪಯೋಗಿಸಕೊಳ್ಳಬೇಡವೆ? ಯಾವುದೇ ಕರ್ಮ ಮಾಡಿದರೂ ಅದರಲ್ಲಿ ಐಹಿಕವೋ ಆಮುಷ್ಮಿಕವೋ ಆದ ಫಲವಿರಬೇಕು ತಾನೆ? ಇಂಥ ಗ್ರಂಥ ಬರೆದು ನೀವೇನು ಸಾಧಿಸುತ್ತೀರಿ? ಅಲ್ಲದೆ, ಅಹಿಂಸೆಯೇ ಮೊದಲ ಧರ್ಮವೆಂಬ ಮಾತನ್ನು ನೀವು ಕೇಳಿಲ್ಲವೆ? ಎರಡನೆಯವರ ಮನಸ್ಸನ್ನು ನೋಯಿಸುವ ಒಂದು ಮಾತನ್ನೂ ಆಡಲು ಪ್ರಾಜ್ಞರು ಹಿಂಜರಿಯುತ್ತಾರೆ. ಹೀಗಿರುವಾಗ ಇಡಿ ಒಂದು ಮತವನ್ನೇ ಖಂಡಿಸುವ ಈ ಗ್ರಂಥದಿಂದ ಎಷ್ಟು ಮಂದಿಯ ಮನಸ್ಸು ನೋಯುತ್ತದೆ ಎಂಬುದನ್ನೂ ಯೋಚಿಸೋಣವಾಗಲಿ. ನಿರರ್ಥಕವಾದ ಈ ಕಾರ್ಯದಲ್ಲಿ ಆಯುಸ್ಸನ್ನು ಕಳೆಯಬಹುದೆ? ಅಷ್ಟೂ ಅಲ್ಲದೆ ನಮ್ಮ ಕಾಲವನ್ನು ಹಾಳು ಮಾಡಲು ತೊಡಗಬಹುದೆ?" ಪಂಡಿತರು ಮುಂದಿಟ್ಟ ಗ್ರಂಥವನ್ನು ಅವರು ಕಣ್ಣೆತ್ತಿಯೂ ನೋಡಲಿಲ್ಲ. ಪಂಡಿತರು ಸಹಜವಾಗಿಯೇ ಖಿನ್ನರಾದರು. ಅದನ್ನು ಗಮನಿಸಿದ ಸ್ವಾಮಿಗಳು "ನಿಮ್ಮ ಮನಸ್ಸನ್ನು ನೋಯಿಸಲು ನಾವು ಈ ಮಾತುಗಳನ್ನು ಆಡುತ್ತಿಲ್ಲ. ನಮ್ಮ ಅಂತಃಕರಣದ ನೋವನ್ನು ನಿಮ್ಮ ಮುಂದೆ ಇಡುತ್ತಿದ್ದೇವೆ ಅಷ್ಟೆ," ಎಂದು ಅವರನ್ನು ಸಂತೈಸಿ ಕಳುಹಿಸಿದರು.

ಆಧಾರ : ಪ್ರೊ. ಎಸ್.ಕೆ. ರಾಮಚಂದ್ರರಾಯರ ಗ್ರಂಥ 'ಶೃಂಗೇರಿ ಪೀಠದ ಮಾಣಿಕ್ಯ' (೧೯೮೩) ಪು. ೧೧೩-೧೪.]